ಎಣ್ಣೆಯ ಜೊತೆ ದಾಸವಾಳದ ಎಲೆಗಳನ್ನು ಬಿಸಿ ಮಾಡಿ ಬಾಟಲಿಯಲ್ಲಿ ಹಾಕಿಟ್ಟ ಪ್ರತಿ ದಿನ ಲೇಪಿಸಿದರೆ ಚರ್ಮದ ಆರೋಗ್ಯ ಹೆಚ್ಚುತ್ತದೆ.

- ಬಾಳೆಹಣ್ಣಿನ ಸಿಪ್ಪೆಯನ್ನು ಅದರ ಮೇಲೆ ನಿಧಾನವಾಗಿ ಉಜ್ಜುವುದರಿಂದ ಒಳ್ಳೆಯ ಪರಿಣಾಮ ಸಿಗುವುದು.
- ಒಂದು ಚಮಚ ಹರಳೆಣ್ಣೆಯನ್ನು ಬೆಚ್ಚಗೆ ಮಾಡಿ ದಿನಕ್ಕೆ 2 ಬಾರಿ ಹಚ್ಚಿದರೆ ಸೋಂಕು ಇರುವ ಜಾಗದಲ್ಲಿ ಪುನಃ ಕೂದಲು ಹುಟ್ಟುತ್ತದೆ.
- ಗಟ್ಟಿ ಮೊಸರನ್ನು ಲೇಪಿಸಿದರೆ ಉರಿಯನ್ನು ಕಡಿಮೆ ಮಾಡಬಹುದು.
- ಹಸಿ ಹಾಲನ್ನು ಹಚ್ಚುವುದರಿಂದ ಕೆಂಪಾಗಿರುವ ಚರ್ಮ ತನ್ನ ನೈಜ ಬಣ್ಣವನ್ನು ಮರಳಿ ಪಡೆಯುತ್ತದೆ.

**ನೆತ್ತಿಯಿಂದ ಕೂದಲು ಉದುರುವುದು**

ನೆತ್ತಿಯ ಕೆಲವು ಜಾಗಗಳಲ್ಲಿ ವೃತ್ತಾಕಾರದಲ್ಲಿ ಕೂದಲು ಉದುರುವುದನ್ನು ಕಾಣಬಹುದು. ವೈದ್ಯರು ಹೇಳುವ ಪರಿಹಾರದ ಜೊತೆಯಲ್ಲಿಯೇ ಮನೆಯಲ್ಲಿ ಸಿಗುವ ಪದಾರ್ಥಗಳನ್ನು ಬಳಸಿ ಕೂದಲು ಉದುರುವುದನ್ನು ತಡೆಗಟ್ಟಬಹುದು.

- ಹಸಿ ಶುಂಠಿಯನ್ನು ಜಜ್ಜಿ ರಸವನ್ನು ತೆಗೆದು ಹಚ್ಚಿದರೆ ಉದುರಿದ ಜಾಗದಲ್ಲಿ ಕೂದಲು ಬೆಳೆಯುತ್ತದೆ.
- ಕೂದಲು ಉದುರುವಿಕೆಯನ್ನು ತಡೆಗಟ್ಟಲು 2 ಎಸಳು ಬೆಳ್ಳುಳ್ಳಿಯಿಂದ ರಸ ತೆಗೆದು 2 ಹನಿ ಆಲಿವ್ ತೈಲದ ಜೊತೆ ಸೇರಿಸಿ ಹಚ್ಚಬೇಕು.
- ಕರಿಮೆಣಸನ್ನು ಪುಡಿ ಮಾಡಿ ಸ್ವಲ್ಪ ಮಜ್ಜಿಗೆಯ ಜೊತೆ ಮಿಶ್ರಿಸಿ ಲೇಪಿಸಿ. ಕರಿಮೆಣಸಿನಲ್ಲಿ ಸಿಗುವ ಸಿಲಿಕಾನ್ ಅಂಶ ಕೂದಲ ಆರೋಗ್ಯ ಕಾಪಾಡುತ್ತದೆ.



- ಸೌತೆಕಾಯಿಯನ್ನು ಅರೆದು ಅದರ ರಸವನ್ನು ತೆಗೆದು ಮಸಾಜ್ ಮಾಡುತ್ತಾ ಹಚ್ಚಿದರೆ ಕೂದಲು ಬೆಳೆಯುತ್ತದೆ.
- ಆಲೂಗೆಡ್ಡೆಯ ಸಿಪ್ಪೆಯನ್ನು ಬಿಸಿ ನೀರಿಗೆ ಹಾಕಿ ಸೋಸಿ ಬಳಸಿದರೆ ಉತ್ತಮ. ಈ ನೀರಿಗೆ 2 ಹನಿ ಜೊಜೋಬಾ ಎಣ್ಣೆಯನ್ನು ಬೆರೆಸಿ ಹಚ್ಚಿದರೆ ಕೂದಲು ಉದುರುವಿಕೆಯನ್ನು ನಿಯಂತ್ರಿಸಬಹುದು. ಆಲೂಗೆಡ್ಡೆಯಲ್ಲಿರುವ ವಿಟಮಿನ್ ಎ, ಬಿ, ಸಿ ಕೂದಲಿನ ಬೇರಿಗೆ ಬೇಕಾದ ಪೋಷಕಾಂಶ ಒದಗಿಸುತ್ತದೆ.
- ಬೆಣ್ಣೆಯೊಂದಿಗೆ ಸ್ವಲ್ಪ ನಿಂಬೆ ರಸ ಸೇರಿಸಿ ಹಚ್ಚಿ.
- ಬೀಟ್‌ರೂಟ್ ರಸ ಹಾಗೂ ಸೂರ್ಯಕಾಂತಿ ಎಣ್ಣೆಯ ಮಿಶ್ರಣವನ್ನು ದಿನಕ್ಕೆ ಒಂದು ಸಲ ಸಮಸ್ಯೆಯಿರುವ ಜಾಗದಲ್ಲಿ ಹಚ್ಚುವುದು ಒಳ್ಳೆಯದು.

**ಹುಳುಕಡ್ಡಿ**

ಇದು ಒಂದು ಫಂಗಸ್ ಸೋಂಕು. ಬಾಚಣಿಗೆಯನ್ನು ಶುಭ್ರವಾಗಿರಿಸದಿದ್ದರೆ, ನೆತ್ತಿಯ ಚರ್ಮವನ್ನು ಶುಚಿಯಾಗಿ ಇರಿಸದಿದ್ದರೆ ಈ ಸಮಸ್ಯೆ ಬರುತ್ತದೆ.

- ಅರ್ಧ ಚಮಚ ಟೀ ಟ್ರೀ ತೈಲವನ್ನು 2 ಚಮಚ ಬೆಚ್ಚಗಿನ ನೀರಿನೊಂದಿಗೆ ಸೇರಿಸಿ ಹುಳುಕಡ್ಡಿ ಇರುವಲ್ಲಿ ಲೇಪಿಸಿ. ನಿತ್ಯ 3–4 ಸಹ ಬಳಸಬೇಕು.
- ಪಪ್ಪಾಯಿ ಕಾಯಿಯನ್ನು ಕತ್ತರಿಸಿ ಮಾಲೀಶು ಮಾಡಿ.
- ಕಲ್ಲುಪ್ಪನ್ನು ಬೆಚ್ಚಗಿನ ನೀರಿನಲ್ಲಿ ಹಾಕಿ ಅದು ಕರಗಿದ ನಂತರ ಹಚ್ಚಿರಿ.
- ರಾತ್ರಿ ಮಲಗುವ ಮುನ್ನ ಬಾದಾಮಿ ಎಣ್ಣೆಯನ್ನು ಬೆಚ್ಚಗೆ ಮಾಡಿ ಹಚ್ಚಿದರೆ ಅದನ್ನು ಹರಡುವುದರಿಂದ ತಪ್ಪಿಸಬಹುದು.
- ಅರಿಶಿನದ ಕೊಂಬಿನೊಂದಿಗೆ ಹಸಿ ಹಾಲನ್ನು ಸೇರಿಸಿ ಅರೆದು ಲೇಪಿಸಿ 10 ನಿಮಿಷದ ನಂತರ ಒದ್ದೆ ಮಾಡಿದ ಹತ್ತಿಯಿಂದ ಒರೆಸಿ. ಅರಿಶಿನದ ಬಣ್ಣ ಹಾಗೆಯೇ ಉಳಿಯುವುದರಿಂದ ಬೇಬಿ ಸೋಪನ್ನು ಬಳಸಿ ನಂತರ ಮತ್ತೊಮ್ಮೆ ಒದ್ದೆ ಮಾಡಿದ ಹತ್ತಿ ಅಥವಾ ಒದ್ದೆ ಮಾಡಿದ ಟವೆಲ್ ಬಳಸಿ ಒರೆಸಿ ಹಾಕಿ.
- 1 ಚಮಚ ಕೊಬ್ಬರಿ ಎಣ್ಣೆಯ ಜೊತೆ ಪುಡಿ ಉಪ್ಪನ್ನು ಸೇರಿಸಿ ಸೋಂಕಿರುವಲ್ಲಿ ಮೆಲ್ಲಗೆ ಸ್ಕ್ರಬ್ ಮಾಡಿದರೆ ಬೇಡವಿರುವ ಚರ್ಮ ಹಾಗೂ ಕೊಳೆಯಿಂದ ಮುಕ್ತಿ ಸಿಗುತ್ತದೆ.




ವಶೀಕರಣ ಸ್ಪೆಷಲಿಸ್ಟ್



ಶ್ರೀಯುತ ಮಂಜುನಾಥ ಗುರೂಜಿಯವರಿಂದ

ಇಲ್ಲಿದೆ ದೇವಿ ಅಘೋರಿ ಶಕ್ತಿಗಳ ಭಂಡಾರ, ದುಷ್ಟ ಅಘೋಚರ ಶಕ್ತಿಗಳು ಆಡಿಸುವ ಆಟದಿಂದ ಮನುಷ್ಯನು ತಾನು ಬಯಸಿದಂತೆ ಸುಖ ಜೀವನವನ್ನು ಸಾಗಿಸಲು ಸಿದ್ಧಿಸಾಧಕರ ಸಹಕಾರ, ನಿಮ್ಮ ಜೀವನಕ್ಕೆ ಪ್ರಮುಖವಾದದ್ದು, ಅಂತಹ ಸಿದ್ಧಿಸಾಧಕರಾದ "ಶ್ರೀ ಮಂಜುನಾಥ ಗುರೂಜಿ" ಇವರಿಂದ ಮಾತ್ರ ಈ ಸಾಧನೆ ಸಾಧ್ಯ

ಇವರು ಕೇರಳ ಬಂಗಾಳ, ಅಘೋರಿ, ನಾಗಸಾಧುಗಳ ಋಷಿಮುನಿಗಳ ಬಳಿ ಪ್ರಾಚೀನ ತಾಳೆಗ್ರಂಥದ ರಹಸ್ಯ, ಮಂತ್ರ-ತಂತ್ರ ದೇವಿಶಕ್ತಿ ಕಠೋರ ಸಾಧನೆಯಿಂದ ಯಾಗ ಯಜ್ಞಗಳ ಮೂಲಕ ಸಿದ್ಧಿ ಮಾಡಿಕೊಂಡಿರುತ್ತಾರೆ.

ವಿದ್ಯೆ, ಉದ್ಯೋಗ, ಶತ್ರುಭಯ, ಪ್ರೇಮವಿಚಾರ, ವಿವಾಹ, ಸಂತಾನ, ಮಾಟಮಂತ್ರ, ಶತ್ರುನಾಶ, ಲೈಂಗಿಕ, ಸಂಮ್ಮೋಹಿನಿ, ಜಾಗದ ವಿಚಾರ, ಬಿಸಿನೆಸ್, ವಿದೇಶ ಪ್ರಯಾಣ, ಸಾಲಬಾಧೆ, ಕೋರ್ಟ್‌ಕೇಸ್, ಗುಪ್ತಸಮಸ್ಯೆ, ಇನ್ನಿತರ ಯಾವುದೇ ಕಠಿಣ ಸಮಸ್ಯೆಯಿರಲಿ ಸಿದ್ಧಿಸಾಧನೆಯಿಂದ ಶಾಸ್ತ್ರೀಯ ಪದ್ಧತಿಯಲ್ಲಿ ಕೆಲವೇ ಗಂಟೆಗಳಲ್ಲಿ ಪರಿಹಾರ ಮಾಡುತ್ತಾರೆ.

ವಿಶೇಷ ಸೂಚನೆ: ಜನವಶೀಕರಣ, ಲಕ್ಷ್ಮೀವಶೀಕರಣ, ಸ್ತ್ರೀಪುರುಷ ವಶೀಕರಣ, ಶತ್ರುವಶೀಕರಣಗಳಿಗೆ ಕೆಲವೇ ಗಂಟೆಗಳಲ್ಲಿ ಪರಿಹಾರ.

ನಮ್ಮನ್ನು ಭೇಟಿಯಾಗುವ ಅವಶ್ಯಕತೆಯಿಲ್ಲ ಒಮ್ಮೆ ಕರೆಮಾಡಿ ನಿಮ್ಮೆಲ್ಲ ಸಮಸ್ಯೆಗಳಿಗೆ ಶಾಶ್ವತ ಪರಿಹಾರ ಪಡೆಯಿರಿ.

ನಮ್ಮಲ್ಲಿ ಕೇಳುವ ನಿಮ್ಮೆಲ್ಲ ವಿಷಯಗಳನ್ನು ಗುಪ್ತವಾಗಿಡಲಾಗುವುದು.

ನಿಮ್ಮ ಸಮಸ್ಯೆಗಳನ್ನು ಯಾರಿಂದಲೂ ಬಗೆಹರಿಸಲು ಸಾಧ್ಯವಿಲ್ಲ, ನಮ್ಮಿಂದ ಮಾತ್ರಸಾಧ್ಯ ಪರಿಹಾರ ಬೇಕಿದ್ದಲ್ಲಿ ಒಮ್ಮೆ ಕರೆಮಾಡಿ

ಶ್ರೀ ಮಂಜುನಾಥ ಗುರೂಜಿ

9886999747